ಶ್ರೀ ಕೆ.ಎನ್. ನಾಗೇಗೌಡ: 8ನೇ ಪಂಚವಾರ್ಷಿಕ ಯೋಜನೆಯಲ್ಲಿ 16.27 ಲಕ್ಷ ಹೆಕ್ಟೇರಿಗೆ ನೀರೊದಗಿಸುವ ಗುರಿ ಇತ್ತು ಅದರಲ್ಲಿಯೇ ನಾವು 15.57 ಲಕ್ಷ ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸಿದ್ದೇವೆ.?

MR. SPEAKER:- The figure doesn't agree with the reports produced by the Economic Survey report. please verity. I think those figures are incorrect.

ಶ್ರೀ ಅಲ್ಲಮ ವೀರಭದ್ರಪ್ಪ: ಅವರು ಏನು ಟಾರ್ಗೆಟ್ ಫಿಕ್ಸ್ ಮಾಡಿದ್ದಾರೆ ಅದನ್ನು ಕಾರ್ಯಗತ ಮಾಡುವುದಕ್ಕೆ ಬಳ್ಳಾರಿ ಜಿಲ್ಲೆಗೆ ಮುಂದಿನ ದಿನಗಳಲ್ಲಿ 30-40 ಕೋಟಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆ ಅದನ್ನು ಮಾಡುತ್ತೀರಾ ಇಲ್ಲವಾ?

ಶ್ರೀ ಕೆ.ಎನ್. ನಾಗೇಗೌಡ: ನೀವು ಹೇಳಿದರೆ ನಾನು ಹಣ ಕೊಡಿಸುತ್ತೇನೆ.

ಅಧ್ಯಕ್ಷರು: ನಾನು ಹಣ ಕೊಡಿ ಎಂದು ಹೇಳುವುದಿಲ್ಲ. ಮಾನ್ಯ ನಾಗೇಗೌಡರು ತುಂಬಾ ಧಾರಾಳ, ಏನು ಕೇಳಿದರೂ ಆಗಲಿ ಎನ್ನುತ್ತಾರೆ. ನೀವು ಸ್ವಲ್ಪ ಸರಿಯಾಗಿ ಕೇಳಿ ತಿಳಿದುಕೊಳ್ಳಿ.

ರಸ್ತೆಯ ಮೇಲೆ ಗಲೀಜು ನೀರು, ಹರಿಯುತ್ತಿರುವುದು

72(5) ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ):

ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಸಜ್ಜನರಾವ್ ವೃತ್ತದ ವ್ಯಾಪ್ತಿಯಲ್ಲಿರುವ ಹೆರಿಗೆ ಆಸ್ಪತ್ರೆ ಆವರಣದಲ್ಲಿ ಇರುವ ಸ್ಟಾಫ್ ಕ್ವಾರ್ಟ್ರ್ಸ್‌ನ ಅಡಿಗೆ ಮನೆಯಿಂದ ಬಚ್ಚಲು ಮನೆಯಿಂದ ಬರುವ ಗಲೀಜು ನೀರು ರೋಶನ್‌ಬಾಗ್ ರಸ್ತೆಯಲ್ಲಿ ಕಳೆದ ಒಂದು ವರ್ಷದಿಂದ ಹರಿಯುತ್ತಿರುವ ವಿಚಾರದ ಬಗ್ಗೆ ದೂರುಗಳೇನಾದರೂ ಬಂದಿದೆಯೇ; (ಆ) ಇದನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ. ಅನಂತನಾಗ್ (ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು.)

(ಅ) ಬಂದಿದೆ.

(ಆ) ವಸತಿ ಗೃಹದ ಹಿಂಭಾಗದಲ್ಲಿ ಕೊಳಚೆ ನೀರಿನ ಪೈಪುಗಳು ಬ್ಲಾಕ್ ಆಗಿದ್ದ ಸಮಯದಲ್ಲಿ ಚರಂಡಿ ನೀರು ಹರಿಯುತ್ತಲಿದ್ದು, ಈಗ ಅದನ್ನು ಸರಿಪಡಿಸಲಾಗಿದೆ.

ಶ್ರೀಮತಿ. ಪ್ರಮೀಳಾ ನೇಸರ್ಗಿ: ಮಾನ್ಯ ಅಧ್ಯಕ್ಷರೆ, ಸಜ್ಜನ್ ರಾವ್ ವೃತ್ತದ ವ್ಯಾಪ್ತಿಯಲ್ಲಿರುವ ಹೆರಿಗೆ ಆಸ್ಪತ್ರೆ ಆವರಣದಲ್ಲಿರುವ ಸ್ಟಾಫ್ ಕ್ವಾರ್ಟ್ರ್ಸ್‌ನ ಅಡಿಗೆ ಮನೆಯಿಂದ ಬಚ್ಚಲು ಮನೆಯಿಂದ

ಬರುವ ಗಲೀಜು ನೀರು ರೋಷನ್ ಬಾಗ್ ರಸ್ತೆಯಲ್ಲಿ ಕಳೆದ ಒಂದು ವರ್ಷದಿಂದ ಹರಿಯುತ್ತಿರುವ ವಿಚಾರದ ಬಗ್ಗೆ ದೂರುಗಳೇನಾದರೂ ಬಂದಿದೆಯೇ ಎಂಬ ಪ್ರಶ್ನೆಗೆ ಮಾನ್ಯ ಸಚಿವರು ಬಂದಿದೆ ಎಂದು ಉತ್ತರ ಹೇಳಿದ್ದಾರೆ. ಇದನ್ನು ತಡೆಗಟ್ಟಲು ಪ್ರಯತ್ನ ಮಾಡುತ್ತೀರಾ ಎಂದು ಕೇಳಿದ್ದಕ್ಕೆ, ಕ್ರಮದ ಬಗ್ಗೆ ಕೇಳಿದ್ದಕ್ಕೆ ನೀವು ಕೊಳಚೆ ನೀರಿನ ಪೈಪುಗಳು ಬ್ಲಾಕ್ ಆಗಿದ್ದ ಸಮಯದಲ್ಲಿ ಚರಂಡಿ ನೀರು ಹರಿಯುತ್ತಲಿದ್ದು ಅದನ್ನು ಈಗ ಸರಿಪಡಿಸಲಾಗಿದೆ ಎಂದು ಉತ್ತರ ನೀಡಿದ್ದೀರಿ.

ಅಧ್ಯಕ್ಷರು: ಯಾವ ರಸ್ತೆ ಎಂದಿರಿ?

ಶ್ರೀಮತಿ. ಪುಷ್ಪಾವತಿ ನೇಸರ್ಗಿ: ರೋಷನ್ ಬಾಗ್ ರಸ್ತೆ, ಈ ಹೆಸರು ಕೇಳಿ ತಮಗೂ ಆಶ್ಚರ್ಯ ಆದಂತೆ ನಮಗೂ ಆಶ್ಚರ್ಯ ಆಯಿತು. ಅದಕ್ಕೋಸ್ಕರ ನಾನು ಪ್ರಶ್ನೆ ಹಾಕಿದೆ. ಅವರ ಹೆಸರು ಜನಕ್ಕೆ ಗೊತ್ತಾಗಲಿ ಎಂದು. ರೋಷನ್ ಬಾಗ್ ರಸ್ತೆಯಲ್ಲಿ ನನಗೆ ಬಹಳ ಆಶ್ಚರ್ಯ ಆಗುತ್ತದೆ. ಒಂದು ಕಡೆ ಹೋಟೆಲ್, ಇನ್ನೊಂದು ಕಡೆ ವಿಜಯಬಾರ್, ಪಕ್ಕದಲ್ಲಿ ಇರುವ ಗೋಡೆಯಲ್ಲಿ ಮಹಾನೀಯರು ಮೂತ್ರ ವಿಸರ್ಜನೆಗೆ ಉಪಯೋಗಿಸುತ್ತಿದ್ದಾರೆ. ಈ ಮಹನೀಯರಿಂದ ರಕ್ಷಣೆ ಮಾಡುವುದಕ್ಕೆ ತಾವು ಏನು ಕ್ರಮ ಹಾಕಿಕೊಂಡಿದ್ದೀರಿ? ಇಡೀ ಬೆಂಗಳೂರಿನಲ್ಲಿರತಕ್ಕ ಗೋಡೆಗಳನ್ನು ಮೂತ್ರ ವಿಸರ್ಜನೆಗೆ ಉಪಯೋಗ ಮಾಡುತ್ತಿರುವ ಮಹನೀಯರಿಂದ ರಕ್ಷಣೆ ಮಾಡುವುದಕ್ಕೆ ತಾವು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಇದನ್ನು ತಪ್ಪಿಸುವುದಕ್ಕೆ ತಾವೇನಾದರೂ ಪ್ರಯತ್ನ ಮಾಡಬೇಕು. ಬೆಂಗಳೂರಿನ ಸೌಂದರ್ಯ ಹಾಳಾಗುತ್ತಿದೆ.

ಅಧ್ಯಕ್ಷರು:- ಮಹನೀಯರಿಗೆ ನಿಸರ್ಗ ಕೊಟ್ಟಿರತಕ್ಕ ಒಂದು ವರದಾನ. ನಿಸರ್ಗ ಹೆಣ್ಣು ಮಕ್ಕಳಿಗೆ ಶಾಪ ಕೊಟ್ಟಿದೆ. ನಾನೇನು ಮಾಡಲಿ ಈಗ ಹೇಳಿ.

ಶ್ರೀಮತಿ. ಪುಷ್ಪಾವತಿ ನೇಸರ್ಗಿ: ಮಾನ್ಯ ಮಂತ್ರಿಗಳು ಬೆಂಗಳೂರಿನ ಸೌಂದರ್ಯವನ್ನು ಹೆಚ್ಚಿಸಲು ಐದು ಕೋಟಿರೂಪಾಯಿ ಸರ್ಕಾರದವರು ಖರ್ಚು ಮಾಡುತ್ತೇವೆಂದು ತಿಳಿಸಿದ್ದಾರೆ. ಈ ಐದು ಕೋಟಿ ರೂಪಾಯಿಯಲ್ಲಿ ಈ ರೋಷನ್ ಬಾಗ್ ರಸ್ತೆಯನ್ನು ದುರಸ್ತಿ ಮಾಡಲು ಎಷ್ಟು ಹಣ ವಿನಿಯೋಗ ಮಾಡುತ್ತೀರಿ ಎಂದು ತಿಳಿಸಬೇಕು. ಅಲ್ಲಿ ವಿಜಯಾ ಬಾರ್‌ಗೆ ಅನುಮತಿ ಕೊಟ್ಟಿದ್ದಾರೆ, ಅವರು ಕುಡಿದು ಬಂದು ಅಲ್ಲಿ ಮೂತ್ರ ವಿಸರ್ಜನೆ ಮಾಡಿ, ವಾಂತಿ ಮಾಡುತ್ತಾರೆ. ಹೆಣ್ಣು ಮಕ್ಕಳಿಗೆ ಒಡಾಡಲು ಬಹಳ ತೊಂದರೆ ಆಗಿದೆ. ಒಂದು ಕಡೆ ಬಾರ್, ಇನ್ನೊಂದು ಕಡೆ ಹೋಟೆಲ್, ಇದರ ಮಧ್ಯ ಸ್ಟಾಫ್ ಕ್ವಾರ್ಟ್ರ್ಸ್. ಇಲ್ಲಿನ ಪೈಪು ಒಡೆದು ಒಂದು ವರ್ಷದ ಮೇಲೆ ಆಗಿದೆ. ಅದನ್ನು ತಕ್ಷಣ ಸರಿಪಡಿಸಬೇಕು. ಇಡೀ ಬೆಂಗಳೂರಿನ ಡ್ರೈನೇಜ್ ನೀರು ಕೆಂಪಾಂಬುಧಿ ಕೆರೆಗೆ ಹೋಗುತ್ತಿದೆ. ವಿಶ್ವೇಶ್ವರ ಪುರಂನಲ್ಲಿ ಒಡೆದಿರುವ ಪೈಪುಗಳನ್ನು ಯಾವಾಗ ಸರಿಪಡಿಸುತ್ತೀರಿ? ಹೆಣ್ಣು ಮಕ್ಕಳಿಗೆ ರಕ್ಷಣೆ ಕೊಡುವ ವಿಚಾರ. ಈ ಬಾರ್ ಕಾಟದಿಂದ, ಅವರು ಕುಡಿದು ಬಂದು ವಾಂತಿ ಮಾಡುವ ಕಾಟದಿಂದ, ಅವರ ಮೂತ್ರ ವಿಸರ್ಜನೆ ಕಾಟದಿಂದ ಹೇಗೆ ರಕ್ಷಣೆ ಮಾಡುತ್ತೀರಿ ದಯವಿಟ್ಟು ಮಂತ್ರಿಗಳು ಹೇಳಬೇಕು. ಎಷ್ಟು ಕಾಲದಲ್ಲಿ ಪೈಪುಗಳನ್ನು ಸರಿಪಡಿಸುತ್ತೀರಿ ಎಂದು ಹೇಳಬೇಕು.

ಶ್ರೀ ಅನಂತನಾಗ್: ಮಾನ್ಯ ಸದಸ್ಯಣಿಯವರು ಹೇಳಿದ ಹಾಗೆ ಒಂದು ವರ್ಷದಿಂದ ಒಡೆದಿರುವ ಪೈಪುಗಳನ್ನು ಸರಿ ಮಾಡಿಲ್ಲ ಎಂದು ಹೇಳುವುದು ಸರಿಯಲ್ಲ. ಆಗಾಗ್ಗೆ ಪೈಪು ಕೆಟ್ಟು ಹೋಗುತ್ತದೆ. ಚರಂಡಿ ತುಂಬಿಕೊಂಡು ಕೆಲವು ಒಮ್ಮೆ ಪೈಪು ಒಡೆದಿರುವುದನ್ನು ಸರಿ ಮಾಡಲಾಗುತ್ತದೆ. ಈ ರೀತಿಒಡೆದಂತಹ ಪೈಪುಗಳ ಬಗ್ಗೆ ಶಾಶ್ವತವಾದಂತಹ ಒಂದು ವ್ಯವಸ್ಥೆ ಮಾಡುವುದಕ್ಕೆ ಕಾರ್ಪೊರೇಷನ್ ಅಧಿಕಾರಿಗಳಿಗೆ ಸೂಚನೆ ನೀಡುತ್ತಿದ್ದೇನೆ. ಸುಲಭ ಶೌಚಾಲಯದ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ಅನೇಕ ಜನ ಪ್ರಾರಂಭ ಮಾಡಲು ಮುಂದೆ ಬಂದಿದ್ದಾರೆ. ಎಲ್ಲಾ ರಸ್ತೆಗಳನ್ನು ಸರಿ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯಣಿಯವರು ಹೇಳಿದಂತಹ ಸ್ಥಳದಲ್ಲಿ ಪರಿಶೀಲನೆ ಮಾಡಿ ಸಮಸ್ಯೆಯನ್ನು ಬಗೆ ಹರಿಸಲು ಪ್ರಯತ್ನ ಮಾಡುತ್ತೇನೆ. ಮೂತ್ರ ವಿಸರ್ಜನೆ ವಿಚಾರ, ನೀವು ಮೂತ್ರ ವಿಸರ್ಜನೆ ಮಾಡಬೇಡಿ ಎಂದು ನಾವು ಹೇಳುವುದಕ್ಕೆ ಬರುವುದಿಲ್ಲ, ಯಾರಿಗಾದರೂ ಕೂಡ ನೀರು ಕಡಿಮೆ ಕುಡಿಯಿರಿ ಎಂದು ಹೇಳುವುದಕ್ಕೆ ಬರುತ್ತದೆಯೇ? ಹೇಳಿದರೂ ಅವರು ಮಾಡೇ ಮಾಡುತ್ತಾರೆ.

ಶ್ರೀಮತ ಪ್ರಮೀಳಾ ನೇಸರ್ಗಿ: ಮಾಡಬೇಡಿ ಎಂದು ನಾವು ಹೇಳುವುದಿಲ್ಲ. ಹೆಣ್ಣು ಮಕ್ಕಳು ಇರುವ ಕಡೆ ನೋಡಿಕೊಂಡು ಮಾಡಬೇಕು. ನಾವು ಹೇಗೆ ಓಡಾಡುವುದು?

ಶ್ರೀ ಜೆ.ಹೆಚ್. ಪಟೇಲ್: ಹೆಣ್ಣು ಮಕ್ಕಳು ಆ ಕಡೆ ಓಡಾಡುವುದು ಬಹಳ ತಪ್ಪು.

ಶ್ರೀಮತಿ ಪ್ರಮೀಳಾ ನೇಸರ್ಗಿ: ಇದು ಬಹಳ ವಿಪರೀತ ಆಯಿತು.

ಅಧ್ಯಕ್ಷರು:- ನಗರದಲ್ಲಿ ಮಾತ್ರ ಈ ಸಮಸ್ಯೆ. ಹಳ್ಳಿಯಲ್ಲಿ ಈ ಸಮಸ್ಯೆ ಇರುವುದಿಲ್ಲ. ಅಲ್ಲಿ ಪ್ರಾಜ್ಞರು ಇರುತ್ತಾರೆ, ಅಲ್ಲವೇ? ಬೆಂಗಳೂರಿನಲ್ಲಿ ಕಡಿಮೆ ಎಂದು ಗೊತ್ತಾಯಿತು.

ಶ್ರೀ ಕುಂಬ್ಳೆ ಸುಂದರ್‌ರಾವ್: ಗಂಡಸರಿಗೆ ಗೋಡೆಯ ಆಶ್ರಯವಾದರೂ ಇದೆ, ಹೆಂಗಸರಿಗೆ ಗೋಡೆಯ ಆಶ್ರಯವೂ ಇಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಮಾನ್ಯ ಮಂತ್ರಿಗಳು ಸರಿಪಡಿಸುತ್ತೇನೆಂದು ಹೇಳುತ್ತಾರೆ. ಈಗಲೇ ಮಂತ್ರಿಗಳನ್ನು ಕರೆಸಿ. ಇವತ್ತಿಗೂ ಅಲ್ಲಿ ಚರಂಡಿ ನೀರು ಹರಿಯುತ್ತಿದೆ. ಪೈಪ್‌ನಲ್ಲಿ ಬ್ಲಾಕ್ ಆಗಿದೆ.

Mr. SPEAKER:- Apart from all these lighter talk we had, please ask your officers, immediately after question hour to go there and setright the whole thing and come back to the house and report the matter to the Hon'ble Member.

SRI ANANT NAG:- Yes Sir.

MR. SPEAKER: It is taken care of Madam.